Tel No.: 08185 200728
e-mail: registrar@uahs.edu.in

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

KELADI SHIVAPPA NAYAKA UNIVERSITY OF AGRICULTURAL AND HORTICULTURAL SCIENCES, SHIVAMOGGA

Main Campus: Iruvakki, Sagara Taluk, Shivamogga District, Karnataka

Dr. Shamarao Jahagirdar
M.Sc.(Agri.), Ph.D. Post Doc (South Korea) FPSI
FIBR FABSc FSPR FAPSSA
Registrar

Office of the Registrar
Sharavathi Administrative Block, II floor
Iruvakki-577 412

No. KSNUAHS(S)/R/60th Minutes/1784/2026-27 Date: 05-11-2026

To,

1.	**Dr. M. V. Dhananjaya** Vice Chancellor and Chairman, Board of Management, KSNUAHS, Shivamogga.	2.	**Sri. G. H. Srinivasa, MLA,** & Hon'ble Member of the Board of Management, KSNUAHS, Shivamogga, Tarikere, Chikkmagaluru District
3.	**The Principal Secretary /Secretary /Deputy Secretary,** Agriculture Department, GoK, 4th Floor, M.S. Building, Bangalore.	4.	**The Principal Secretary/Special Secretary/ Deputy Secretary**, Finance Department, GoK, Vidhana Soudha, Bangalore.
5.	**The Principal Secretary/ Secretary/ Deputy Secretary**, Horticulture Department, GoK, 4th floor, M. S. Building, Bangalore	6.	**Dr. Ajit Singh Yadav,** Assistant Director General, ICAR - Krishi Anusandhan Bhavan 2, PUSANew Delhi
7.	**Sri. J. G. Kaveriappa,** Hon'ble Member of the Board of Management, KSNUAHS, Shivamogga, Madikeri 571 201	8.	**Sri. H. D. Devikumar,** Hon'ble Member of the Board of Management, KSNUAHS, Shivamogga, Holehanasawadi, Shivamogga,
9.	**Sri. H. S. Shashank,** Hon'ble Member of the Board of Management, KSNUAHS, Shivamogga Rajendranagar, Shivamogga	10.	**Sri. T. Basavaraj Naik,** Hon'ble Member of the Board of Management, KSNUAHS, Shivamogga Gadikoppa, Shivamogga,
11.	**Sri. Yogeswara H.R,** Hon'ble Member of the Board of Management, KSNUAHS, Shivamogga, Mallappanahalli, Hosadurga.	12.	**Dr. H.K. Veeranna,** Dean, College of Agriculture, Navile Campus, Shivamogga
13. Dr. Shamarao Jahagirdar, Registrar and Member – Secretary, KSNUAHS, Shivamogga			

Sir,

Sub: Releasing the Minutes of 60th Meeting of Board of Management, KSNUAHS, Shivamogga held on 29-09-2026 …Reg.

Ref Approval of the Vice Chancellor, KSNUAHS, Shivamogga dated: 05-11-2026.

*****

I am directed to release the Minutes of 60th Meeting of the Board of Management, KSNUAHS, Shivamogga, held on 29-09-2026 at 11.00 A.M., in Board Meeting Room, Office of the Vice Chancellor, KSNUAHS, Iruvakki Campus, Shivamogga.

Thanking you,

Yours faithfully,

Registrar and Member Secretary

ಕುಲಸಚಿವರು
Registrar
ಕೆ.ಶಿ.ಸಾ.ಕೃ.ತೋ.ವಿ.ವಿ., ಶಿವಮೊಗ್ಗ
K.S.N.U.A.H.S., Shivamogga.

Copy to:

1. The Secretary to VC – It is informed to bring the same to the kind notice of the Hon'ble Vice Chancellor, KSNUAHS, Shivamogga.
2. The BOM file.

ದಿನಾಂಕ 29–09–2026 ರಂದು ಬೆಳಿಗ್ಗೆ 11.00 ಘಂಟೆಗೆ, ಮಾನ್ಯ ಕುಲಪತಿಗಳ ಸಭಾ ಕೊಠಡಿ, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಇರುವಕ್ಕಿ ಆವರಣ, ಶಿವಮೊಗ್ಗದಲ್ಲಿ ನಡೆದ 60ನೇ ವ್ಯವಸ್ಥಾಪನಾ ಮಂಡಳಿ ಸಭೆಯ ನಡಾವಳಿಗಳು.

Minutes of the 60th Meeting of the Board of Management of Keladi Shivappa Nayaka University of Agricultural and Horticultural Sciences, Shivamogga held on 29-09-2026 at 11.00 a.m. in the Meeting Hall of the Vice Chancellor's Office, Iruvakki Campus, Shivamogga.

ಭಾಗವಹಿಸಿದ ಸದಸ್ಯರು: Members Attended:

1.	ಡಾ. ಎಮ್.ವಿ. ಧನಂಜಯ, ಮಾನ್ಯ ಕುಲಪತಿಗಳು, ಕೆ.ಶಿ.ನಾ.ಕೃ.ತೋ.ವಿ.ವಿ, ಶಿವಮೊಗ್ಗ Dr. M. V. Dhananjaya, Hon'ble Vice Chancellor, KSNUAHS, Shivamogga	ಅಧ್ಯಕ್ಷರು Chairman
2.	ಶ್ರೀ ಜಿ. ಹೆಚ್. ಶ್ರೀನಿವಾಸ, ಮಾನ್ಯ ವಿಧಾನ ಸಭಾ ಸದಸ್ಯರು, ತರೀಕೆರೆ ಕ್ಷೇತ್ರ, ಚಿಕ್ಕಮಗಳೂರು ಜಿಲ್ಲೆ Sri G.H. Srinivasa, Member of Karnataka Legislative Assembly, Tarikere Constituency, Tarikere, Chikkamagaluru District	ಸದಸ್ಯರು Member
3.	ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಪರವಾಗಿ ಶ್ರೀಮತಿ ಶೀತಲ್ ಎಂ. ಹಿರೇಮಠ್, ಅಧೀನ ಕಾರ್ಯದರ್ಶಿಗಳು ಹಾಜರಾಗಿರುತ್ತಾರೆ The Secretary to Government, Horticulture Department, Government of Karnataka, Bengaluru represented by Smt. Sheetal M Hiremath, Under Secretary, Government of Karnataka attended online.	ಸದಸ್ಯರು Member
4.	ಡಾ. ಅಜಿತ್ ಸಿಂಗ್ ಯಾದವ್, ಸಹಾಯಕ ಮಹಾನಿರ್ದೇಶಕರು, ಐ.ಸಿ.ಎ.ಆರ್. – ಕೃಷಿ ಅನುಸಂಧಾನ ಭವನ II, ನವದೆಹಲಿ. Dr. Ajit Singh Yadav, Assistant Director General, ICAR - Krishi Anusandhan Bhavan II, New Delhi.	ಸದಸ್ಯರು Member
5.	ಶ್ರೀ ಜೆ. ಜಿ. ಕಾವೇರಿಯಪ್ಪ, ಪ್ರಗತಿಪರ ರೈತರು, ಮಡಿಕೇರಿ Sri J. G. Kaveriappa, Progressive Farmer, New Extension, Madikeri	ಸದಸ್ಯರು Member
6.	ಶ್ರೀ ಹೆಚ್. ಡಿ. ದೇವಿಕುಮಾರ್, ಪ್ರಗತಿಪರ ರೈತರು, ಹೊಳೆಹನಸವಾಡಿ, ಶಿವಮೊಗ್ಗ Sri H. D. Devikumar, Progressive Farmer, Holehanasawadi, Shivamogga	ಸದಸ್ಯರು Member
7.	ಶ್ರೀ ಹೆಚ್. ಎಸ್. ಶಶಾಂಕ್, ಪ್ರಗತಿಪರ ರೈತರು, ರಾಜೇಂದ್ರನಗರ, ಶಿವಮೊಗ್ಗ Sri H. S. Shashank, Progressive Farmer, Rajendranagar, Shivamogga	ಸದಸ್ಯರು Member
8.	ಶ್ರೀ. ಟಿ. ಬಸವರಾಜ ನಾಯ್ಕ್, ಶಿಕ್ಷಣ ತಜ್ಞರು, ಶಿವಮೊಗ್ಗ, Sri. T. Basavaraj Naik, Eminent Educationist, Shivamogga,	ಸದಸ್ಯರು Member
9.	ಶ್ರೀ. ಯೋಗೀಶ್ವರ ಎಚ್. ಆರ್, ಕೃಷಿ–ಕೈಗಾರಿಕೋದ್ಯಮಿ, ಮಲ್ಲಪ್ಪನಹಳ್ಳಿ, ಚಿತ್ರದುರ್ಗ ಜಿಲ್ಲೆ Sri. Yogeswara H.R, Agro-industrialist, Mallappanahalli, Chitradurga Dist	ಸದಸ್ಯರು Member
10.	ಡಾ. ಹೆಚ್. ಕೆ. ವೀರಣ್ಣ, ಡೀನ್, ಕೃಷಿ ಮಹಾವಿದ್ಯಾಲಯ, ನವಿಲೆ ಆವರಣ, ಶಿವಮೊಗ್ಗ Dr. H. K. Veeranna, Dean, College of Agriculture, Navile Campus, Shivamogga	ಸದಸ್ಯರು Member
11.	ಡಾ. ಶಾಮರಾವ ಜಹಾಗೀರದಾರ, ಕುಲಸಚಿವರು, ಕೆ.ಶಿ.ನಾ.ಕೃ.ತೋ.ವಿ.ವಿ. ಶಿವಮೊಗ್ಗ Dr. Shamarao Jahagirdar, Registrar, KSNUAHS, Shivamogga	ಸದಸ್ಯ–ಕಾರ್ಯದರ್ಶಿಗಳು Member-Secretary

Members Not Attended: ಸಭೆಯಲ್ಲಿ ಭಾಗವಹಿಸದ ಸದಸ್ಯರು:

1.	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು The Secretary to Government, Agriculture Department, Government of Karnataka, Bengaluru.	ಸದಸ್ಯರು Member
2.	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು The Principal Secretary to Government of Karnataka, Finance Department, Bengaluru	ಸದಸ್ಯರು Member

******

ಆರಂಭದಲ್ಲಿ, ಡಾ. ಶಾಮರಾವ ಜಹಾಗೀರದಾರ, ಕುಲಸಚಿವರು ಮತ್ತು ವ್ಯವಸ್ಥಾಪನಾ ಮಂಡಳಿಯ ಸದಸ್ಯ ಕಾರ್ಯದರ್ಶಿ, ಕೆ.ಶಿ.ನಾ.ಕೃ.ತೋ.ವಿ.ವಿ., ಶಿವಮೊಗ್ಗ ಇವರು ಗೌರವಾನ್ವಿತ ಅಧ್ಯಕ್ಷರಿಗೆ ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ 60ನೇ ವ್ಯವಸ್ಥಾಪನಾ ಮಂಡಳಿಯ ಸಭೆಗೆ ಆತ್ಮೀಯ ಸ್ವಾಗತವನ್ನು ಕೋರಿದರು.

ಇತ್ತೀಚೆಗೆ ನಿಧನರಾದ ವಿಶ್ರಾಂತ ಕುಲಪತಿ ಡಾ: ಎಂ.ಕೆ. ನಾಯಕ್ ಇವರು ವಿಶ್ವವಿದ್ಯಾಲಯಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸಿ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಲಾಯಿತು.

ನಂತರ, ಅವಧಿ ಪೂರ್ಣಗೊಳಿಸಿ ಹೊರಹೋಗಲಿರುವ ಸದಸ್ಯರಾದ ಡಾ. ಶ್ರೀನಿವಾಸ ವಿ, ಡೀನ್ ತೋಟಗಾರಿಕೆ ಮಹಾವಿದ್ಯಾಲಯ, ಮೂಡಿಗೆರೆ ಇವರಿಗೆ ತಮ್ಮ ಸಕ್ರಿಯ ಪಾಲುಗೊಳ್ಳುವಿಕೆ ರಚನಾತ್ಮಕ ಸಲಹೆಗಳು ಹಾಗೂ ವಿಶ್ವವಿದ್ಯಾಲಯಕ್ಕೆ ನೀಡಿದ ಅಮೂಲ್ಯ ಕೊಡುಗೆಗಳಿಗಾಗಿ ವಿಶ್ವವಿದ್ಯಾಲಯದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸಿದರು.

ಮುಂದುವರೆದು, ಕುಲಸಚಿವರು ನೂತನ ಸದಸ್ಯರುಗಳಾದ. ಶ್ರೀ. ಟಿ. ಬಸವರಾಜ ನಾಯ್ಕ್, ಶಿಕ್ಷಣ ತಜ್ಞರು, ಶಿವಮೊಗ್ಗ, ಹಾಗೂ ಶ್ರೀ. ಯೋಗೀಶ್ವರ ಎಚ್. ಆರ್, ಕೃಷಿ-ಕೈಗಾರಿಕೋದ್ಯಮಿ, ಮಲ್ಲಪ್ಪನಹಳ್ಳಿ, ಹೊಸದುರ್ಗ ಹಾಗೂ ಡಾ. ಹೆಚ್. ಕೆ. ವೀರಣ್ಣ, ಡೀನ್, ಕೃಷಿ ಮಹಾವಿದ್ಯಾಲಯ, ನವಿಲೆ ಆವರಣ, ಶಿವಮೊಗ್ಗ ಇವರುಗಳಿಗೆ ಶುಭಾಕಾಂಕ್ಷೆಗಳನ್ನು ತಿಳಿಸುತ್ತಾ ಸಭೆಗೆ ಪರಿಚಯಿಸಿ ಸ್ವಾಗತಿಸಿದರು.

ಕುಲಸಚಿವರು 60ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಪ್ರಸ್ತಾವಿಸುವ ಕಾರ್ಯಸೂಚಿಗಳನ್ನು ಪ್ರಸ್ತುತಪಡಿಸಲು ವ್ಯವಸ್ಥಾಪನಾ ಮಂಡಳಿ ಅಧ್ಯಕ್ಷರ ಅನುಮತಿಯನ್ನು ವಿನಂತಿಸಿದರು. ಅನುಮತಿಯ ಮೇರೆಗೆ, 59ನೇ ವ್ಯವಸ್ಥಾಪನಾ ಮಂಡಳಿ ಸಭೆಯ ನಡಾವಳಿಗಳ ಮೇಲೆ ಕ್ರಮ ಕೈಗೊಂಡ ಕಾರ್ಯ ವರದಿ ಮತ್ತು 60ನೇ ವ್ಯವಸ್ಥಾಪನಾ ಮಂಡಳಿಯ ಸಭೆಯ ಕಾರ್ಯಸೂಚಿಯನ್ನು ಮಂಡಿಸಿದರು. ವ್ಯವಸ್ಥಾಪನಾ ಮಂಡಳಿಯ 59ನೇ ಸಭೆಯಲ್ಲಿ ಕೈಗೊಂಡ ಕಾರ್ಯ ವರದಿಯನ್ನು ಸಭೆ ಅನುಮೋದಿಸಿತು. ತದನಂತರ, ಸಭೆಯಲ್ಲಿ ಮಂಡಿಸಿದ ಈ ಕೆಳಗಿನ ಕಾರ್ಯಸೂಚಿಗಳನ್ನು ಚರ್ಚೆಗೆ ಕೈಗೆತ್ತಿಕೊಂಡು ನಿರ್ಣಯಗಳನ್ನು ಈ ಕೆಳಗಿನಂತೆ ಕೈಗೊಳ್ಳಲಾಯಿತು.

At the outset, Dr. Shamarao Jahagirdar, Registrar and the Member-Secretary of Board of Management, KSNUAHS, Shivamogga, extended a warm welcome to Hon'ble Vice Chancellor & Chairman and all the Hon'ble Members, Board of Management to the 60th BoM Meeting.

The house offered tributes to Dr. M.K. Naik, former Vice-Chancellor, KSNUAHS, Shivamogga who passed away recently and praised his contributions to the University.

The Registrar extended sincere thanks to the outgoing Member on successful completion of tenure *viz.*, Dr. Srinivas V, Dean, College of Horticulture, Mudigere for his valuable active involvement and constructive suggestions and contributions. Further, The Registrar welcomed and introduced Sri. T. Basavaraj Naik, Eminent Educationist, Shivamogga and Sri. Yogeswara H.R, Agro-industrialist, Mallappanahalli, Hosadurga, Dr. H. K. Veeranna, Dean, College of Agriculture, Navile Campus, Shivamogga as a new Members of Board of Management, KSNUAHS, Shivamogga, to the Board and to the Meeting.

The Registrar requested the Chairman of BoM to accord permission to conduct 60th Board of Management Meeting and present the Action Taken Report of 59th BoM and agenda items. With the permission of the Chairman, the Registrar presented the Action Taken Report (ATR) of 59th BoM and the same was approved by the august body. Later, the following agenda items were taken-up for the discussion and resolved as indicated below:

Minutes of 59th meeting (15-05-2026).

59/2	ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ಯೋಗೀಶ್ ಎಲ್ ಎನ್, ಸಹಾಯಕ ಪ್ರಾಧ್ಯಾಪಕರು, ಕೃ.ತೋ.ಸಂ.ಕೇಂದ್ರ, ಬಾವಿಕೆರೆ ಇವರು ಈ ಹಿಂದೆ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ ತತ್ಪೂರ್ವದ ಸೇವೆಯನ್ನು ಪರಿಗಣಿಸಿ ಸಿ.ಎ.ಎಸ್.–2016 ರ ನಿಯಮಾವಳಿಗಳ ಅಡಿಯಲ್ಲಿ ಮುಂಬಡ್ತಿ ನೀಡುವ ಕುರಿತು. Regarding the promotion of Dr. Yogish L N, Assistant Professor, AHRS, Bavikere, working in Keladi Shivappa Nayaka University of Agricultural and Horticultural Sciences, Shivamogga, under CAS-2016 guidelines, in consideration of his past service as Assistant Professor.	ವಿಶ್ವವಿದ್ಯಾಲಯವು ಡಾ. ಯೋಗೀಶ್ ಎಲ್. ಎನ್. ಸಹಾಯಕ ಪ್ರಾಧ್ಯಾಪಕರು, ಕೃ.ತೋ.ಸಂ.ಕೇಂದ್ರ, ಬಾವಿಕೆರೆ ಇವರು ಈ ಹಿಂದೆ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ ತತ್ಪೂರ್ವದ ಸೇವೆಯನ್ನು ಪರಿಗಣಿಸಿ ಸಿ.ಎ.ಎಸ್.–2016 ಪ್ರಸ್ತಾವನೆಯನ್ನು ವ್ಯವಸ್ಥಾಪನಾ ಮಂಡಳಿಯ ಗಮನಕ್ಕೆ ತಂದು ನಂತರ ಸೂಕ್ತ ನಿರ್ದೇಶನ ಮತ್ತು ಸ್ಪಷ್ಟ ಅಭಿಪ್ರಾಯಕ್ಕಾಗಿ ಸರ್ಕಾರವನ್ನು ಕೋರಿದೆ. ಚರ್ಚೆಯ ನಂತರ, ವ್ಯವಸ್ಥಾಪನಾ ಮಂಡಳಿಯು, ಈ ಹಿಂದಿನ ಸೇವಯನ್ನು ಮುಂಬಡ್ತಿಗೆ ಪರಿಗಣಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿತು. The promotion of Dr. Yogish L N, Assistant Professor, AHRS, Bavikere, under CAS-2016 guidelines, considering his past service as Assistant Professor. The Board after thorough discussion noted the point and opined that it is not possible to consider the previous service for promotion. (As was discussed in 59th BOM Meeting) ವ್ಯವಸ್ಥಾಪನಾ ಮಂಡಳಿಯು ಈ ವಿಷಯವನ್ನು ಮುಂದೂಡಿತು. The Board Deferred the Item (As discussed in 60th BOM Meeting). **(Action: Administrative Officer)**

ಚರ್ಚಿಸಲಾದ ಇತರ ವಿಷಯಗಳು Other Issue Discussed

Point No. 1	ಶ್ರೀ ಶ್ರೀನಿವಾಸ, ವ್ಯವಸ್ಥಾಪನಾ ಮಂಡಳಿ ಸದಸ್ಯರು ಹಾಗೂ ಮಾನ್ಯ ಶಾಸಕರು ಇವರು ಶಿವಮೊಗ್ಗ/ಇರುವಕ್ಕಿ ವಿಶ್ವವಿದ್ಯಾಲಯದ ಆವರಣದಲ್ಲಿ ಕಾನೂನು ಕೋಶವನ್ನು ಸ್ಥಾಪಿಸಲು ಸಲಹೆ ನೀಡಿದರು. Sri Srinivas, Hon'ble Board Member and Member of Legislative Assembly, suggested for the establishment of Legal Cell at Shivamogga/Iruvakki Campuses. ವ್ಯವಸ್ಥಾಪನಾ ಮಂಡಳಿಯು ಈ ಕೆಳಗಿನ ಸಲಹೆಗಳನ್ನು ಸೂಚಿಸಿತು: 1. ಕಾನೂನು ವಿಭಾಗಕ್ಕಾಗಿ ಒಬ್ಬ ಹಿರಿಯ ವಕೀಲರನ್ನು ನಾಮನಿರ್ದೇಶನ ಮಾಡುವುದು ಹಾಗೂ ಹಾಲಿ ಇರುವ ವಕೀಲರ ತಂಡವನ್ನು ಕೂಲಂಕಷವಾಗಿ ಮರುಪರಿಶೀಲಿಸುವುದು. 2. ವಿಶ್ವವಿದ್ಯಾಲಯದಲ್ಲಿ.ಕಳೆದ ವರ್ಷಗಳಲ್ಲಿ ವಿಲೇವಾರಿಯಾದ ಪ್ರಕರಣಗಳ ಸಂಖ್ಯೆ ಮತ್ತು ಯಶಸ್ಸಿನ ಕುರಿತಾದ ವಿವರವಾದ ಮಾಹಿತಿಯನ್ನು ಒದಗಿಸುವುದು. The Board of Management made suggestions as follows: 1. To nominate one senior Advocate for legal cell and thorough review of existing panel of advocates. 2. To provide information on number of cases disposed and success rate during previous years. **(Action: Administrative Officer)**

Point No. 2	ಗೌರವಾನ್ವಿತ ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳು ಐ.ಡಿ.ಪಿ. ಯೋಜನೆಯ ಸಮಗ್ರ ಮಾಹಿತಿಯ ಸಲುವಾಗಿ ಸೂಕ್ತವಾದ ಸಮಿತಿಯನ್ನು ರಚಿಸುವಂತೆ ಸೂಚಿಸಿದರು. ಈ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿದ ಸಭೆಯು, ಅದು ಐ.ಸಿ.ಎ.ಆರ್. ಯೋಜನೆಯಾಗಿದ್ದು ಅದರ ಮಾರ್ಗದರ್ಶನದಂತೆ ಅನುಷ್ಠಾನಗೊಂಡಿರುವುದರಿಂದ ಮಾಹಿತಿ ಸಮಿತಿಯ ಅಗತ್ಯವಿಲ್ಲವೆಂದು ಅಭಿಪ್ರಾಯಪಟ್ಟಿತು. Hon'ble Board Members suggested to constitute a suitable Committee regarding IDP Project issue. On a detailed discussion on the issue, the Board opined that IDP is an ICAR project and implemented on the ICAR guidelines, and hence no need to constitute an information committee. ಸದರಿ ವಿಷಯದಲ್ಲಿ ಗೌರವಾನ್ವಿತ ಸದಸ್ಯರುಗಳಿಂದ ನಡಾವಳಿ ಮೇಲಿನ ತಮ್ಮ ಅವಲೋಕನದಲ್ಲಿ ವಿಭಿನ್ನ ಅಭಿಮತ ವ್ಯಕ್ತವಾಗಿರುತ್ತದೆ ಹಾಗೂ ಬಹುಪಾಲು ಸದಸ್ಯರು ಕರಡು ನಡಾವಳಿಯನ್ನು ಅನುಮೋದಿಸಿರುತ್ತಾರೆ. ಮಾನ್ಯ ಸದಸ್ಯರೊಬ್ಬರ ಅವಲೋಕನ ದಂತೆ ಐ.ಡಿ.ಪಿ.ಯ 2026–27ನೇ ಸಾಲಿನ ಕ್ರಿಯಾ ಯೋಜನೆ ಬಗ್ಗೆ ಹೇಳುವುದಾದರೆ, ಪ್ರಸ್ತುತ ಸಾಲಿನಲ್ಲಿ ಸದರಿ ಯೋಜನೆಯೇ ಚಾಲ್ತಿಯಲ್ಲಿರುವುದಿಲ್ಲ. ಆದ್ದರಿಂದ, ಈ ಕುರಿತು ಸಮಿತಿ ರಚನೆ ಅಗತ್ಯವಾಗಿಲ್ಲದ ಕಾರಣ, ಕರಡು ನಡಾವಳಿಯನ್ನು ಪರಿಗಣಿಸಲಾಯಿತು. **The observation received from among the Hon'ble Members are different and majority have approved the draft resolution. As observed by one of the Member regarding requirement of action plan for 2026-27, it is to submit that the project is not in existence during the said period. In view of this, the draft resolution is considered.** ವ್ಯವಸ್ಥಾಪನಾ ಮಂಡಳಿಯ ಸದಸ್ಯರು ಒದಗಿಸಲಿರುವ ದಾಖಲೆಗಳನ್ನು ಪರಿಶೀಲಿಸಬೇಕೆಂದು ಸೂಚಿಸಿತು. **The Board of Management suggested to verify the documents to be provided by Hon'ble Members of the Board of Management.** **(Action: Administrative Officer)**

Minutes of 60th meeting (29-09-2026).

Item	ಶೀರ್ಷಿಕೆ Title	ನಿರ್ಣಯ Resolution
60.1	Promotion of teachers under Career Advancement Scheme – 2016.	ವ್ಯವಸ್ಥಾಪನಾ ಮಂಡಳಿಯು ವೃತ್ತಿ ಪ್ರಗತಿ ಯೋಜನೆ – 2016 ರ ಅಡಿಯಲ್ಲಿ ಶಿಕ್ಷಕರ ಬಡ್ತಿಯ ಪ್ರಸ್ತಾವನೆಯನ್ನು ಸಭೆಯ ನಡಾವಳಿಯ ದೃಢೀಕರಣವನ್ನು ಕಾಯ್ದಿರಿಸಿ ಆದೇಶಗಳನ್ನು ಹೊರಡಿಸಲು ಒಪ್ಪಿಗೆ ಸೂಚಿಸಿತು. ಈ ಕೆಳಗಿನ ಶಿಕ್ಷಕರಿಗೆ ಸಹಾಯಕ ಪ್ರಾಧ್ಯಾಪಕರಿಂದ ಸಹಪ್ರಾಧ್ಯಾಪಕರ ಹುದ್ದೆಗೆ (ಶೈಕ್ಷಣಿಕ ಹಂತ 12 ರಿಂದ 13A) ಮುಂಬಡ್ತಿ. 1. ಡಾ. ಗಜೇಂದ್ರ ಟಿ.ಎಚ್. (ಕೃಷಿ ವಿಸ್ತರಣಾ ಶಿಕ್ಷಣ). ಈ ಕೆಳಗಿನ ಶಿಕ್ಷಕರಿಗೆ ಸಹ ಪ್ರಾಧ್ಯಾಪಕರಿಂದ ಪ್ರಾಧ್ಯಾಪಕರ ಹುದ್ದೆಗೆ (ಶೈಕ್ಷಣಿಕ ಹಂತ 13A ರಿಂದ 14) ಮುಂಬಡ್ತಿ. 1. ಡಾ. ಎಲ್.ಬಿ. ಅಶೋಕ್ (ಮಣ್ಣು ವಿಜ್ಞಾನ) 2. ಡಾ. ರಾಜಶೇಖರಪ್ಪ ಕೆ. (ಕೀಟಶಾಸ್ತ್ರ) 3. ಡಾ. ರಾಘವೇಂದ್ರ ಎಸ್. (ಜೈವಿಕ ರಸಾಯನಶಾಸ್ತ್ರ) 4. ಡಾ. ಭೂಮಿಕಾ ಎಚ್.ಆರ್. (ಪಿ.ಎಸ್.ಎಂ.ಎ.ಸಿ) 5. ಡಾ. ಗಣಪತಿ ಎಂ. (ಬೆಳೆ ಶರೀರಶಾಸ್ತ್ರ) The Board of Management approved the Item as presented. Members also consented to issue orders pending approval of the Minutes. Promotion of the Assistant Professor to Associate Professor from Academic level 12 to 13A approved to the following teacher. 1. Dr. Gagendra T.H. (Agricultural Extension Education). Promotion of the Associate Professor to Professor from Academic level 13A to 14 approved for the following teachers. 1. Dr. L.B. Ashok (Soil Science) 2. Dr. Rajashekarappa K (Entomology) 3. Dr. Raghavendra S (Biochemistry) 4. Dr. Bhoomika H.R. (PSMAC) 5. Dr. Ganapathi M (Crop Physiology) **(Action: Administrative Officer)**

60.2	ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಇರುವಕ್ಕಿ, ಶಿವಮೊಗ್ಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ಬಿ ಹೇಮ್ಲಾ ನಾಯಕ್, ಶಿಕ್ಷಣ ನಿರ್ದೇಶಕರು, ಹಾಗೂ ನಿವೃತ್ತಿ ನೌಕರರಾದ ಡಾ. ಹೆಚ್ ಡಿ ಮೋಹನ್ ಕುಮಾರ್, ನಿವೃತ್ತ ಪ್ರಾಧ್ಯಾಪಕರು ಇವರಿಗೆ ಹಳೆಯ ಪಿಂಚಣಿ ಯೋಜನೆಯಡಿಯಲ್ಲಿ (OPS) ಪಿಂಚಣಿ ಸೌಲಭ್ಯವನ್ನು ವಿಸ್ತರಿಸುವ ಕುರಿತು.	ವ್ಯವಸ್ಥಾಪನಾ ಮಂಡಳಿಯು ಡಾ. ಬಿ ಹೇಮ್ಲಾ ನಾಯಕ್, ಶಿಕ್ಷಣ ನಿರ್ದೇಶಕರು, ಹಾಗೂ ನಿವೃತ್ತ ನೌಕರರಾದ ಡಾ. ಹೆಚ್. ಡಿ. ಮೋಹನ್ ಕುಮಾರ್, ನಿವೃತ್ತ ಪ್ರಾಧ್ಯಾಪಕರು ಇವರಿಗೆ ಹಳೆಯ ಪಿಂಚಣಿ ಯೋಜನೆಯಡಿಯಲ್ಲಿ (OPS) ಪಿಂಚಣಿ ಸೌಲಭ್ಯವನ್ನು ವಿಸ್ತರಿಸುವ ಪ್ರಸ್ತಾವನೆಯನ್ನು ಅನುಮೋದಿಸಿ. ಹಳೆ ಪಿಂಚಣಿ ಮೊತ್ತ ಮತ್ತು ರಜೆ ಸಂಬಳ ವಂತಿಕೆ ಮೊತ್ತವನ್ನು ಈ ಹಿಂದೆ ಸೇವೆ ಸಲ್ಲಿಸಿದ ವಿಶ್ವವಿದ್ಯಾಲಯದಿಂದ ಕೆ.ಶಿ.ನಾ.ಕೃ.ತೋ.ವಿ.ವಿ. ಶಿವಮೊಗ್ಗದ ಖಾತೆಗೆ ಜಮೆ ಮಾಡುವುದರ ಬಗ್ಗೆ ಕ್ರಮ ಕೈಗೊಳ್ಳಲು ಹಾಗೂ ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರಕ್ಕೆ ವಿಶ್ವವಿದ್ಯಾಲಯದಿಂದ ಪ್ರಸ್ತಾವನೆ ಸಲ್ಲಿಸಬೇಕೆಂದು ಸೂಚಿಸಿತು. The Board of Management approved the proposal to extend pensionery benefits under the Old Pension Scheme (OPS) to Dr. B. Hemla Naik (Director of Education) and Dr. H.D. Mohan Kumar (Retired Professor). Further, the pension and leave salary contributions be deposited into the university's account from their past universities and a proposal to be submitted to Finance Department by the University. **(Action: Administrative Officer/Comptroller)**
60.3	ಡಾ. ಮಹೇಶ್ವರಪ್ಪ ವಿ, ಸಹ ಪ್ರಾಧ್ಯಾಪಕರು (ಅರಣ್ಯ), ಕೃಷಿ ಮಹಾವಿದ್ಯಾಲಯ, ಶಿವಮೊಗ್ಗ ಇವರ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಭರಿಕೆಯ ಕುರಿತು.	ವ್ಯವಸ್ಥಾಪನಾ ಮಂಡಳಿಯು ಡಾ. ಮಹೇಶ್ವರಪ್ಪ ವಿ, ಸಹ ಪ್ರಾಧ್ಯಾಪಕರು (ಅರಣ್ಯ), ಕೃಷಿ ಮಹಾವಿದ್ಯಾಲಯ, ಶಿವಮೊಗ್ಗ ಇವರ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಭರಿಕೆಯ ಪ್ರಸ್ತಾವನೆಯನ್ನು ಅನುಮೋದಿಸಿತು. The Board of Management approved the proposal for the reimbursement of medical expenses of Dr. Maheshwarappa V, Associate Professor (Forestry), College of Agriculture, Shivamogga. **(Action: Administrative Officer)**
60.4	ಡಾ. ಎಲ್ ಬಿ ಅಶೋಕ್, ಸಹ ಪ್ರಾಧ್ಯಾಪಕರು (ಮಣ್ಣು ವಿಜ್ಞಾನ), ಕೆ.ಶಿ.ನಾ.ಕೃ.ತೋ.ವಿ.ವಿ., ಶಿವಮೊಗ್ಗ ಇವರನ್ನು ಕರ್ನಾಟಕ ಸರ್ಕಾರದ ಸಚಿವಾಲಯದ ಅರಣ್ಯ ಪರಿಸರ ಮತ್ತು ಜೀವಿ ಪರಿಸ್ಥಿತಿ ಇಲಾಖೆಯ ವೈಜ್ಞಾನಾಧಿಕಾರಿ ಗ್ರೇಡ್–2 ಸಸ್ಯ ಸಂಪನ್ಮೂಲ ಹುದ್ದೆಯನ್ನು ವೈಜ್ಞಾನಿಕ ಅಧಿಕಾರಿ ಗ್ರೇಡ್–1 ಉನ್ನತೀಕರಿಸಿದ ಹುದ್ದೆಗೆ ಮರುಸ್ಥಳ ನಿಯುಕ್ತಿಗೊಳಿಸಿರುವ ಆದೇಶವನ್ನು ಸ್ಥಿರೀಕರಣಗೊಳಿಸುವ ಕುರಿತು.	ವ್ಯವಸ್ಥಾಪನಾ ಮಂಡಳಿಯು ಡಾ. ಎಲ್ ಬಿ ಅಶೋಕ್, ಸಹ ಪ್ರಾಧ್ಯಾಪಕರು (ಮಣ್ಣು ವಿಜ್ಞಾನ), ಕೆ.ಶಿ.ನಾ.ಕೃ.ತೋ.ವಿ.ವಿ., ಶಿವಮೊಗ್ಗ ಇವರನ್ನು ಕರ್ನಾಟಕ ಸರ್ಕಾರದ ಸಚಿವಾಲಯದ ಅರಣ್ಯ ಪರಿಸರ ಮತ್ತು ಜೀವಿ ಪರಿಸ್ಥಿತಿ ಇಲಾಖೆಯ ವೈಜ್ಞಾನಾಧಿಕಾರಿ ಗ್ರೇಡ್–2 ಸಸ್ಯ ಸಂಪನ್ಮೂಲ ಹುದ್ದೆಯನ್ನು ವೈಜ್ಞಾನಿಕ ಅಧಿಕಾರಿ ಗ್ರೇಡ್–1 ಉನ್ನತೀಕರಿಸಿದ ಹುದ್ದೆಗೆ ಮರುಸ್ಥಳ ನಿಯುಕ್ತಿಗೊಳಿಸಿರುವ ಆದೇಶವನ್ನು ಸ್ಥಿರೀಕರಣಗೊಳಿಸುವ ಪ್ರಸ್ತಾವನೆಯನ್ನು ಅನುಮೋದಿಸಿತು. The Board of Management approved the proposal to ratify the order regarding the deputation of Dr. L.B. Ashok, Associate Professor (Soil Science), KSNUAHS, Shivamogga, to the post of Scientific Officer (Grade-1), upgraded from the post of Scientific Officer (Grade-2, Plant Resources) from the Department of Forest, Ecology and Environment, Government of Karnataka. **(Action: Administrative Officer)**

60.5	ಶ್ರೀ ಆದಪ್ಪಗೌಡ ಎಂ ಪಾಟೀಲ್, ಹಿರಿಯ ಪ್ರಯೋಗಶಾಲಾ ಸಹಾಯಕರು, ಕೆ.ಶಿ.ನಾ.ಕೃ.ತೋ.ವಿ.ವಿ.,ಶಿವಮೊಗ್ಗ ಇವರನ್ನು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಗೆ ಹಾಗೂ ಶ್ರೀಮತಿ ಚೈತಾಲಿ ಜಿ ಶೆಟ್ಟಿ, ಪ್ರಯೋಗಶಾಲಾ ಸಹಾಯಕರು, ತೋ.ವಿ.ವಿ.**ಬಾಗಲಕೋಟೆ** ಇವರನ್ನು ಕೆ.ಶಿ.ನಾ.ಕೃ.ತೋ.ವಿ.ವಿ.,ಶಿವಮೊಗ್ಗಕ್ಕೆ ಪರಸ್ಪರ ವರ್ಗಾವಣೆ ಮಾಡಿರುವ ಆದೇಶವನ್ನು ಸ್ಥಿರೀಕರಣಗೊಳಿಸುವ ಕುರಿತು.	ವ್ಯವಸ್ಥಾಪನಾ ಮಂಡಳಿಯು ಶ್ರೀ ಆದಪ್ಪಗೌಡ ಎಂ ಪಾಟೀಲ್, ಹಿರಿಯ ಪ್ರಯೋಗಶಾಲಾ ಸಹಾಯಕರು, ಕೆ.ಶಿ.ನಾ.ಕೃ.ತೋ.ವಿ.ವಿ., ಶಿವಮೊಗ್ಗ ಇವರನ್ನು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಗೆ ಹಾಗೂ ಶ್ರೀಮತಿ ಚೈತಾಲಿ ಜಿ ಶೆಟ್ಟಿ, ಪ್ರಯೋಗಶಾಲಾ ಸಹಾಯಕರು, ತೋ.ವಿ.ವಿ. ಬಾಗಲಕೋಟೆ ಇವರನ್ನು ಕೆ.ಶಿ.ನಾ.ಕೃ.ತೋ.ವಿ.ವಿ., ಶಿವಮೊಗ್ಗಕ್ಕೆ ಪರಸ್ಪರ ವರ್ಗಾವಣೆ ಮಾಡಿರುವ ಆದೇಶದ ಪ್ರಸ್ತಾವನೆಯನ್ನು ಸ್ಥಿರೀಕರಿಸಿತು. The Board of Management approved the proposal to ratify the order for the mutual transfer of Sri Adappagowda M. Patil, Senior Laboratory Assistant, KSNUAHS, Shivamogga, to the University of Horticultural Sciences, Bagalkote, and Smt. Chaitali G. Shetty, Laboratory Assistant, UHS, Bagalkote, to KSNUAHS, Shivamogga. **(Action: Administrative Officer)**
60.6	ಶ್ರೀ ಮೆಹಬೂಬ್ ಪಟೇಲ್, ಪ್ರೂಫ್ ರೀಡರ್ (ಕನ್ನಡ), ಕೆ.ಶಿ.ನಾ.ಕೃ.ತೋ.ವಿ.ವಿ., ಶಿವಮೊಗ್ಗ ಇವರನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿಗೆ ವರ್ಗಾವಣೆ ಮಾಡಿರುವ ಆದೇಶವನ್ನು ಸ್ಥಿರೀಕರಣಗೊಳಿಸುವ ಕುರಿತು.	ವ್ಯವಸ್ಥಾಪನಾ ಮಂಡಳಿಯು ಶ್ರೀ ಮೆಹಬೂಬ್ ಪಟೇಲ್, ಪ್ರೂಫ್ ರೀಡರ್ (ಕನ್ನಡ), ಕೆ.ಶಿ.ನಾ.ಕೃ.ತೋ.ವಿ.ವಿ., ಶಿವಮೊಗ್ಗ ಇವರನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿಗೆ ವರ್ಗಾವಣೆ ಮಾಡಿರುವ ಆದೇಶದ ಪ್ರಸ್ತಾವನೆಯನ್ನು ಸ್ಥಿರೀಕರಿಸಿತು. The Board of Management approved the ratification of the transfer order of Sri Mehboob Patel, Proof Reader (Kannada), KSNUAHS, Shivamogga, to the University of Agricultural Sciences, Raichur. **(Action: Administrative Officer)**
60.7	ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗದ ಅಡಿಯಲ್ಲಿ ಡಾ. ಸಿ. ಎ. ವಿರಕ್ತಮಠ್ ಅಂತರಾಷ್ಟ್ರೀಯ ಕೀಟ ವಿಂಗಡಣೆ ಮತ್ತು ಗೆದ್ದಲು ಹುಳುಗಳ ಸಂಶೋಧನಾ ಸಹಯೋಗ ಕೇಂದ್ರ ಸ್ಥಾಪನೆ ಕುರಿತು Establishment of Dr. C.A. Viraktamath International Collaboratory in Insect Systematics and Termite Research under KSNUAHS, Shivamogga	ವ್ಯವಸ್ಥಾಪನಾ ಮಂಡಳಿಯು ವಿಶ್ವವಿದ್ಯಾಲಯದಲ್ಲಿ ಡಾ. ಸಿ. ಎ. ವಿರಕ್ತಮಠ್ ಅಂತರಾಷ್ಟ್ರೀಯ ಕೀಟ ವಿಂಗಡಣೆ ಮತ್ತು ಗೆದ್ದಲು ಹುಳುಗಳ ಸಂಶೋಧನಾ ಸಹಯೋಗ ಕೇಂದ್ರವನ್ನು ಸ್ಥಾಪಿಸಲು ಅನುಮೋದನೆ ನೀಡಿತು ಹಾಗೂ ಬಾಹ್ಯ ಅನುದಾನಿತ ಯೋಜನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸಂಯೋಜಕರಿಗೆ ಸೂಚಿಸಿತು. The Board of Management approved the establishment of 'Dr. C. A. Viraktamath International Collaborative Centre for Insect Systematics and Termite Research' at the University and suggested to the coordinator to submit proposals for external funded projects. **(Action: Director of Research & AO)**
60.8	ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಶೇಷ್ಠತಾ ಕೇಂದ್ರದಲ್ಲಿ ಇಂಗಾಲ ಕೃಷಿ ಪದ್ದತಿ ಮತ್ತು ಇಂಗಾಲ ಮಾನ್ಯತೆ ಸ್ಥಾಪನೆ Establishment of Carbon Farming and Carbon Credit Systems unit at Keladi Shivappa Nayaka Centre of Excellence (CoE), Shivamogga.	ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಶೇಷ್ಠತಾ ಕೇಂದ್ರದಲ್ಲಿ ಇಂಗಾಲ ಕೃಷಿ ಪದ್ದತಿ ಮತ್ತು ಇಂಗಾಲ ಮಾನ್ಯತೆ ಸ್ಥಾಪನೆ ಪ್ರಸ್ತಾವನೆಯನ್ನು ಅನುಮೋದಿಸಿತು. The Board of Management approved the proposal to establish a carbon farming and Carbon Credit Systems unit at the Keladi Shivappa Nayaka Centre of Excellence (CoE) Shivamogga. **(Action: Director of Research & A O)**

60.9	ಕೆ.ಶಿ.ನಾ.ಕೃ.ತೋ.ವಿ.ವಿ., ಶಿವಮೊಗ್ಗದಲ್ಲಿ ತಂತ್ರಜ್ಞಾನ ವರ್ಗಾವಣೆ, ಪರವಾನಗಿ (ಲೈಸೆನ್ಸಿಂಗ್) ಮತ್ತು ಪೇಟೆಂಟ್ ಸೌಲಭ್ಯ ಕೋಶ (ಸೆಲ್) ಸ್ಥಾಪನೆ Establishment of Technology Transfer, Licensing and Patent Facilitation Cell under KSNUAHS, Shivamogga.	ವ್ಯವಸ್ಥಾಪನಾ ಮಂಡಳಿಯು ಕೆ.ಶಿ.ನಾ.ಕೃ.ತೋ.ವಿ.ವಿ., ಶಿವಮೊಗ್ಗದಲ್ಲಿ ತಂತ್ರಜ್ಞಾನ ವರ್ಗಾವಣೆ, ಪರವಾನಗಿ (ಲೈಸೆನ್ಸಿಂಗ್) ಮತ್ತು ಪೇಟೆಂಟ್ ಸೌಲಭ್ಯ ಕೋಶ (ಸೆಲ್) ಸ್ಥಾಪಿಸುವ ಪ್ರಸ್ತಾವನೆಯನ್ನು ಅನುಮೋದಿಸಿತು. The Board of Management approved the proposal to establish a Technology Transfer, Licensing and Patent Cell under KSNUAHS, Shivamogga. **(Action: Director of Research & A O)**
60.10	ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಕೆಳದಿ ಚೆನ್ನಮ್ಮ ನಿಖರ ನೀರಾವರಿ ಉನ್ನತ ಸಂಶೋಧನಾ ಕೇಂದ್ರ ಸ್ಥಾಪನೆ. Establishment of Keladi Chennamma Advanced Research Centre for Precision Irrigation at KSNUAHS, Shivamogga.	ವಿಶ್ವವಿದ್ಯಾಲಯದಲ್ಲಿ ಕೆಳದಿ ಚೆನ್ನಮ್ಮ ನಿಖರ ನೀರಾವರಿ ಉನ್ನತ ಸಂಶೋಧನಾ ಕೇಂದ್ರ ಸ್ಥಾಪಿಸುವ ಪ್ರಸ್ತಾವನೆಯನ್ನು ಅನುಮೋದಿಸಿತು. The Board approved the proposal to establish the Keladi Chennamma Centre of Excellence Precision Irrigation at University. **(Action: Director of Research & A O)**
60.11	ಕೃಷಿ ವಿಶ್ವವಿದ್ಯಾಲಯ, ಧಾರವಾಡದ ಸಂಶೋಧನಾ ನಿರ್ದೇಶನಾಲಯದಲ್ಲಿ ದಿ: 08.07.2025 ರಂದು ನಡೆದ ರಾಜ್ಯ ಸಮನ್ವಯ ಉಪಸಮಿತಿಯ ಸಂಶೋಧನಾ ಸಭೆಯ ಶಿಫಾರಸುಗಳನ್ನು ಅಂಗೀಕರಿಸಿ, ಅನುಷ್ಠಾನಗೊಳಿಸಲು ಅನುಮೋದನೆ. Approval for adoption and implementation of recommendations of State co-ordination subcommittee on research held on 08.07.2025 at Directorate of Research, UAS, Dharwad	ವ್ಯವಸ್ಥಾಪನಾ ಮಂಡಳಿಯು ಕೃಷಿ ವಿಶ್ವವಿದ್ಯಾಲಯ, ಧಾರವಾಡದ ಸಂಶೋಧನಾ ನಿರ್ದೇಶನಾಲಯದಲ್ಲಿ ದಿ: 08.07.2025 ರಂದು ನಡೆದ ರಾಜ್ಯ ಸಮನ್ವಯ ಉಪಸಮಿತಿಯ ಸಂಶೋಧನಾ ಸಭೆಯ ಶಿಫಾರಸುಗಳನ್ನು ಅಂಗೀಕರಿಸಿ, ಅನುಷ್ಠಾನಗೊಳಿಸುವ ಪ್ರಸ್ತಾವನೆಯನ್ನು ಅನುಮೋದಿಸಿತು. The Board of Management approved the proposal to accept and implement the recommendations of the State Coordination Sub-committee's research meeting, held on July 8, 2025, at the Directorate of Research, University of Agricultural Sciences, Dharwad. **(Action: Director of Research & A O)**
60.12	ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಆದಾಯವನ್ನು ತಂದು ಕೊಟ್ಟ ಪ್ರಧಾನ ಸಂಶೋಧಕರು (Principal Investigators), ಸಹ-ಪ್ರಧಾನ ಸಂಶೋಧಕರು (Co-Principal Investigators), ಕ್ಷೇತ್ರ ಅಧೀಕ್ಷಕರು (Farm Superintendents) ಹಾಗೂ ಕೃಷಿ ವಿಜ್ಞಾನ ಕೇಂದ್ರದ (KVKs) ವಿಜ್ಞಾನಿಗಳಿಗೆ ಪ್ರೋತ್ಸಾಹಧನ ಪ್ರಶಸ್ತಿ ಹಾಗೂ ಯೋಗ್ಯತಾ ಪ್ರಮಾಣಪತ್ರ ನೀಡುವುದು. Incentive award and certificate merit for Principal investigator/ Co-Principal Investigators/ Farm Superintendents/ Scientists of Krishi Vigyan Kendras (KVKs) for generating higher institutional revenue.	ವ್ಯವಸ್ಥಾಪನಾ ಮಂಡಳಿಯು Adhoc-ICAR, ಭಾರತ ಸರ್ಕಾರ, ಕರ್ನಾಟಕ ಸರ್ಕಾರ, ರಾಷ್ಟ್ರೀಯ ಕೃಷಿ ವಿಜ್ಞಾನ ಕೇಂದ್ರ/ಸಲಹಾ ಸೇವೆಗಳು/ಮಾನವ ಸಂಪನ್ಮೂಲ ಅಭಿವೃದ್ಧಿ ಸಂಶೋಧನಾ ಯೋಜನೆಗಳು/ತರಬೇತಿ ಕಾರ್ಯಕ್ರಮಗಳಲ್ಲಿ ಸ್ಪರ್ಧಾತ್ಮಕ ಬಾಹ್ಯ ಅನುದಾನಿತ ಯೋಜನೆಗಳ ಮೂಲಕ ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಆದಾಯವನ್ನು ತಂದು ಕೊಟ್ಟ ಪ್ರಧಾನ ಸಂಶೋಧಕರು, ಸಹ-ಪ್ರಧಾನ ಸಂಶೋಧಕರು ಕ್ಷೇತ್ರ ಅಧೀಕ್ಷಕರು ಹಾಗೂ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಿಗೆ ಪ್ರೋತ್ಸಾಹಧನ ಪ್ರಶಸ್ತಿ ಹಾಗೂ ಯೋಗ್ಯತಾ ಪ್ರಮಾಣಪತ್ರ ನೀಡುವ ಪ್ರಸ್ತಾವನೆಯನ್ನು ಅನುಮೋದಿಸಿತು. ರಾಸಾಯನಿಕ ಪರೀಕ್ಷಾ ತರಬೇತಿ ಮತ್ತು ಖಾಸಗಿ ಪರೀಕ್ಷಾ ಯೋಜನೆಗಳಿಗೆ ಈ ಯೋಜನೆ ಅನ್ವಯಿಸುವುದಿಲ್ಲ ಎಂದು ಸೂಚಿಸಿತು. ಪ್ರಸ್ತಾವಿತ ಪ್ರೋತ್ಸಾಹಕ ಮೊತ್ತಗಳು, ಅರ್ಹತಾ ಮಾನದಂಡಗಳು ಮತ್ತು ಹಂಚಿಕೆ ವಿಧಾನವನ್ನು ಮುಂದಿನ ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಲಾಗುವುದು. The Board approved the proposal to Incentive award and Certificate Merit to Principal investigator/ Co-Principal Investigators/ Farm Superintendents/ Scientists of KVKs for generated higher institutional revenue competitively to the University through

		competitive externally funded projects. The Board reiterated this scheme is not applicable to the Trainings, Testing Chemical projects and private company testing projects. The proposed incentive amounts, eligibility criteria and allocation procedure will be presented in the next Board of Management Meeting. **(Action: Director of Research & AO)**
60.13	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ನೀಡಲು ಖರೀದಿ ಮಾಡುವ ಕುರಿತು. Purchase and Distribution of Laptop for UG & PG Students of SC/ST under SCSP/TSP Scheme.	ಮಂಡಳಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ನೀಡಲು ಈ ಕೆಳಗಿನ ಸಲಹೆಗಳೊಂದಿಗೆ ಸದರಿ ವಿಷಯವನ್ನು ಅನುಮೋದಿಸಿತು: 1. ತಾಂತ್ರಿಕ ಬಿಡ್‌ನಲ್ಲಿನ (Technical bid) ವಿವರಣೆಯನ್ನು ಪರಿಶೀಲಿಸಬೇಕು. 2. ಲ್ಯಾಪ್‌ಟಾಪ್‌ನ ಮಾದರಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು ಮತ್ತು ಅದರ ಕಾರ್ಯಕ್ಷಮತೆಯನ್ನು ಪರೀಕ್ಷಿಸುವುದು. The Board approved the proposal to provide laptops to undergraduate and postgraduate students belonging to Scheduled Castes and Scheduled Tribes, with following suggestions: 1. The specifications of the Technical bid should be verified. 2. Sample of laptop should be deposited in University and its efficiency should be examined. **(Action: Director, SCST & A O)**
60.14	Arranging Exhibition Stall and Allied Works on Hired Basis for (4 days) Krishi & Thotagarike Mela 2026-27 at College of Agriculture, Navile, Shivamogga.	ಮಂಡಳಿಯು ಈ ಕೆಳಗಿನ ಸಲಹೆಗಳೊಂದಿಗೆ ಸದರಿ ವಿಷಯವನ್ನು ಅನುಮೋದಿಸಿತು: 1. ಬರ ನಿರ್ವಹಣೆ ತಂತ್ರಜ್ಞಾನಗಳನ್ನು ವಿವಿಧ ಸಾಮಾಜಿಕ ಜಾಲತಾಣ ವೇದಿಕೆಗಳಲ್ಲಿ ಪ್ರಸಾರ ಮಾಡಬೇಕು ಹಾಗೂ ಸಂಶೋಧನಾ ನಿರ್ದೇಶಕರು ಮತ್ತು ವಿಸ್ತರಣಾ ನಿರ್ದೇಶಕರ ಕಚೇರಿಗಳಲ್ಲಿ ಪ್ರತ್ಯೇಕ ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಬೇಕು. 2. ಕಾಲೇಜಿನ ಸಾಂಸ್ಕೃತಿಕ ಉತ್ಸವಗಳನ್ನು ಕೃಷಿ ಮೇಳದೊಂದಿಗೆ ಸಂಯೋಜಿಸವುದು. 3. ಕಳೆದ 5 ವರ್ಷಗಳಲ್ಲಿ ಆಸ್ತಿ ಅಧಿಕಾರಿಗಳ ಕಛೇರಿಯಿಂದ ಕೈಗೊಂಡಿರುವ ಹಲವಾರು ಕಾಮಗಾರಿಗಳ ಮರುಪರಿಶೀಲನೆ ನಡೆಸಬೇಕು. The Board approved the item with following suggestion: 1. Drought management technologies should be broadcasted on various platform of social media. There should be separate help line center at Director of Research/Director of Extension. 2. Cultural Festivals of the College may be clubbed with Krishimela. 3. To Review the civil works taken up by Estate Branch during the last 5 years. **(Action: Estate Officer)**

60.15	Providing Chain link fencing and Jungle clearance from gate no 1 to gate no 4 at College of Agriculture, Navile, Shivamogga.	ವ್ಯವಸ್ಥಾಪನಾ ಮಂಡಳಿಯು ಶಿವಮೊಗ್ಗದ ನವಿಲೆ ಕೃಷಿ ಮಹಾವಿದ್ಯಾಲಯದಲ್ಲಿ ಗೇಟ್ ಸಂಖ್ಯೆ 1 ರಿಂದ ಗೇಟ್ ಸಂಖ್ಯೆ 4 ರವರೆಗೆ ಚೈನ್ ಲಿಂಕ್ ಬೇಲಿ ಅಳವಡಿಕೆ ಮತ್ತು ಪೊದೆಗಳ ತೆರವುಗೊಳಿಸುವ ಪ್ರಸ್ತಾವನೆಯನ್ನು ಅನುಮೋದಿಸಿತು. The Board of Management approved the proposal for the installation of chain-link fencing and the clearing of bushes from Gate No. 1 to Gate No. 4 at the College of Agriculture, Navile, Shivamogga. **(Action: Estate Officer)**
60.16	Providing water roofing structure to existing roof of College building at Diploma college of (Agriculture) Brahmavara.	ಮಂಡಳಿಯು ಈ ವಿಷಯವನ್ನು ಅನುಮೋದಿಸಿತು. The Board approved the item. **(Action: Estate Officer)**
60.17	Providing GI Sheet Roofing for Prevention of Roof Leakage and Allied Works to PG Boys Hostel at College of Agriculture, Navile, Shivamogga.	ಮಂಡಳಿಯು ಈ ವಿಷಯಕ್ಕೆ ಅನುಮೋದನೆ ನೀಡಿತು ಮತ್ತು ಕೆಲಸ ಪೂರ್ಣಗೊಳ್ಳುವ ಮುನ್ನವೇ ಇಎಂಡಿ (EMD) ಮೊತ್ತವನ್ನು ಹಿಂದಿರುಗಿಸಲಾಗಿರುವ ನಿರ್ದಿಷ್ಟ ಪ್ರಕರಣಗಳಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಅಧಿಕಾರಿಗೆ ಸೂಚನಾ ಪತ್ರವನ್ನು ಹೊರಡಿಸುವಂತೆ ಸಲಹೆ ನೀಡಿತು. The Board approved the item and suggested to issue a note to the concerned officer where EMD has been returned without completion of the work in previous cases. **(Action: Administrative Officer)**
60.18	Providing GI Sheet Roofing and Waterproofing Works to the Library Building at KSNUAHS, Shivamogga.	ವ್ಯವಸ್ಥಾಪನಾ ಮಂಡಳಿಯು ಈ ಕೆಳಗಿನ ಸಲಹೆಗಳೊಂದಿಗೆ ಸದರಿ ವಿಷಯವನ್ನು ಅನುಮೋದಿಸಿತು: 1. ಭವಿಷ್ಯದಲ್ಲಿ ಇಂತಹ ಕಾಮಗಾರಿಗಳನ್ನು ವಿಶ್ವವಿದ್ಯಾಲಯದ ಆಸ್ತಿ ಅಧಿಕಾರಿಗಳ ವಿಭಾಗ ಇವರು ಕೈಗೊಳ್ಳಬೇಕು. 2. ಸೌರ ಫಲಕ ಗ್ರಿಡ್ ಅಳವಡಿಕೆಯನ್ನು ಕಾರ್ಯಗತಗೊಳಿಸುವುದರಲ್ಲಿ ಉಂಟಾದ ವಿಳಂಬದ ಕುರಿತು ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸುವುದು. The Board of Management approved the item and suggestion as follows: 1. Such works should be taken up by the University Estate Branch in future. 2. A committee be constituted for delay in commissioning of solar panel grid installation. **(Action: Administrative Officer)**
60.19	Purchase and Installation of Auditorium Chairs for the Auditorium at the College of Agriculture, Navile, Shivamogga.	ವ್ಯವಸ್ಥಾಪನಾ ಮಂಡಳಿಯು ಶಿವಮೊಗ್ಗದ ನವಿಲೆಯಲ್ಲಿರುವ ಕೃಷಿ ಮಹಾವಿದ್ಯಾಲಯದ ಸಭಾಂಗಣಕ್ಕೆ ಆಸನಗಳ ಖರೀದಿ ಮತ್ತು ಅಳವಡಿಸುವ ಪ್ರಸ್ತಾವನೆಯನ್ನು ಅನುಮೋದಿಸಿತು. The Board of Management approved the proposal to Purchase and Installation of Auditorium Chairs for the Auditorium at the College of Agriculture, Navile, Shivamogga. **(Action: Estate Officer)**
60.20	Ratification of Providing HT Power supply of 250 KVA Transformer with Metering Cubical & extension LT internal Distribution line using UG cable at COH, Mudigere.	ಮಂಡಳಿಯು ಈ ವಿಷಯವನ್ನು ಅನುಮೋದಿಸಿತು ಮತ್ತು ELP ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ 2026–27ನೇ ಸಾಲಿನಲ್ಲಿ ICAR SAU ಅನುದಾನಕ್ಕಾಗಿ ಪ್ರಸ್ತಾವನೆಯನ್ನು ಸಿದ್ಧಪಡಿಸುವಂತೆ ಸೂಚಿಸಿತು. The Board approved the item and suggested to send a proposal to the ICAR under SAU Grants for 2026-27 relating to ELP Programme. **(Action: Estate Officer)**

60.21	The Annual Accounts of KSNUAHS, Shivamogga for the year 2025-26.	ಕಾರ್ಯಸೂಚಿಯಲ್ಲಿ ಸೂಚಿಸಲಾದ ಪ್ರಸ್ತಾವನೆಯನ್ನು ಮಂಡಳಿಯು ಅನುಮೋದಿಸಿತು. The Board approved the proposal. **(Action: Comptroller & Registrar)**
60.22	The Audit compliance report of KSNUAHS, Shivamogga for the year 2022-23, 2023-24 and 2024-25.	ಕಾರ್ಯಸೂಚಿಯಲ್ಲಿ ಸೂಚಿಸಲಾದ ಪ್ರಸ್ತಾವನೆಯನ್ನು ಮಂಡಳಿಯು ಅನುಮೋದಿಸಿತು. The Board approved the proposal. **(Action: Comptroller & Registrar)**
Table Agenda		
T.A. 60/1.	ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗದ ವ್ಯವಸ್ಥಾಪನಾ ಮಂಡಳಿಯ ಗೌರವಾನ್ವಿತ ಸದಸ್ಯರಿಗೆ ಆಸೀನತೆಯ ಶುಲ್ಕವನ್ನು (Sitting Fee) ಹೆಚ್ಚಿಸುವ ಕುರಿತು.	ಗೌರವಾನ್ವಿತ ವ್ಯವಸ್ಥಾಪನಾ ಮಂಡಳಿ ಸದಸ್ಯರಿಗೆ ಆಸೀನತೆಯ ಶುಲ್ಕವನ್ನು (Sitting Fee) ಹೆಚ್ಚಿಸುವ ಪ್ರಸ್ತಾವನೆಯನ್ನು ಅನುಮೋದಿಸಿತು ಮತ್ತು ICAR ಸಂಸ್ಥೆಗಳಿಗೆ ಅನುಗುಣವಾಗಿ ಈ ಮೊತ್ತವನ್ನು 4,000 ರೂ.ಗಳಿಗೆ ಹೆಚ್ಚಿಸಲಾಯಿತು. The proposal regarding the sitting fee for the esteemed members of the Board of Management was approved, and the amount was increased to Rs. 4,000/- in accordance with ICAR Institutes. **(Action: A O)**
T.A. 60/2.	ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗದಲ್ಲಿ ಕಾನೂನು ಕೋಶವನ್ನು ಸ್ಥಾಪಿಸುವ ಕುರಿತು.	ಮಂಡಳಿಯು ಈ ವಿಷಯವನ್ನು ಮುಂದೂಡಿತು ಮತ್ತು ಈ ಕೆಳಗಿನಂತೆ ಸಲಹೆ ನೀಡಿತು: 1. ಕಾನೂನು ಘಟಕವನ್ನು ಸ್ಥಾಪಿಸಲು ವಿಶೇಷ ಸಭೆಯನ್ನು ಕರೆಯುವುದು. 2. ಹಿರಿಯ ವಕೀಲರನ್ನು ನೇಮಿಸುವುದು ಹಾಗೂ ಹಾಲಿ ಇರುವ ವಕೀಲರ ತಂಡವನ್ನು ಕೂಲಂಕಷವಾಗಿ ಪರಿಶೀಲಿಸುವುದು. The Board deferred the item and suggested: 1. To call a special meeting for the establishment of Legal Cell. 2. Appointment of senior council, the existing lawyer panel be reviewed thoroughly. **(Action: AO)**
T.A. 60/3.	ಪರಸ್ಪರ ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಕುರಿತು	ವ್ಯವಸ್ಥಾಪನಾ ಮಂಡಳಿಯು ಡಾ. ಸಂಜೀವ ಜಕಾತಿಮಠ, ಸಹಾಯಕ ಪ್ರಾಧ್ಯಾಪಕರು (ಸಸ್ಯರೋಗಶಾಸ್ತ್ರ), ಕೃ.ತೋ.ಸಂ.ಕೇಂದ್ರ, ಶೃಂಗೇರಿ ಇವರನ್ನು ಕೆ.ಶಿ.ನಾ.ಕೃ.ತೋ.ವಿ.ವಿ. ಶಿವಮೊಗ್ಗದಿಂದ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಇಲ್ಲಿಗೆ ಹಾಗೂ ಡಾ. ಆಶಾ ಕೆ.ಎಂ. ಸಹಾಯಕ ಪ್ರಧ್ಯಾಪಕರು, (ತೋಟಗಾರಿಕೆ), ಐ.ಸಿ.ಎ.ಆರ್. – ಕೃಷಿ ವಿಜ್ಞಾನ ಕೇಂದ್ರ, ತಮಕ, ಕೋಲಾರ ಇವರನ್ನು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯಿಂದ ಕೆ.ಶಿ.ನಾ.ಕೃ.ತೋ. ವಿ.ವಿ. ಶಿವಮೊಗ್ಗಕ್ಕೆ ಪರಸ್ಪರ ಅಂತರ ವಿಶ್ವವಿದ್ಯಾಲಯ ವರ್ಗಾವಣೆಯ ಪ್ರಸ್ತಾವನೆಯನ್ನು ಅನುಮೋದಿಸಿತು. The Board of Management approved the proposal for the mutual inter-university transfer of Dr. Sanjeeva Jakathimath, Assistant Professor (Plant Pathology) at AHRS, Sringeri, from KSNUAHS, Shivamogga to the University of Horticultural Sciences, Bagalkot and Dr. Asha K.M., Assistant Professor (Horticulture) ICAR-Krishi Vigyan Kendra, Tamaka, Kolar, from University of Horticultural Sciences, Bagalkot, to KSNUAHS, Shivamogga. **(Action: Administrative Officer)**

T.A. 60/4.	ನೇರ ನೇಮಕಾತಿ ಮೂಲಕ ಸಹ ಪ್ರಾಧ್ಯಾಪಕರಾಗಿ ನೇಮಕಗೊಂಡ ಶಿಕ್ಷಕರಿಗೆ, ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಅನ್ವಯವಾಗುವಂತೆ ಸಹ ಪ್ರಾಧ್ಯಾಪಕರ ವೇತನ ಶ್ರೇಣಿಯನ್ನು ನಿಗದಿಪಡಿಸುವ ಕುರಿತು.	ಸದರಿ ವಿಷಯವನ್ನು ಮಂಡಳಿಯು ಅನುಮೋದಿಸಿತು. ಆದರೆ, ಅರ್ಹತೆಯ ದಿನಾಂಕದಿಂದ ಅನ್ವಯವಾಗುವಂತೆ ಪ್ರಾಧ್ಯಾಪಕರ ಹುದ್ದೆಗೆ ಬಡ್ತಿ ನೀಡುವ ವಿಷಯವು, ಅವರ ಹೊಸ ಅರ್ಜಿಯೊಂದಿಗೆ ನಡೆಸಲಾಗುವ ಪರಿಶೀಲನೆಗೆ ಒಳಪಟ್ಟಿರುತ್ತದೆ ಎಂದು ಸೂಚಿಸಿತು. ಕೃ.ವಿ.ವಿ., ಬೆಂಗಳೂರಿನಿಂದ ವಿಭಜನೆಗೊಂಡು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರುಗಳು (ದಿನಾಂಕ 31–01–2011ರ ಅಧಿಸೂಚನೆಯಡಿ ಸಹ ಪ್ರಾಧ್ಯಾಪಕರಾಗಿ ನೇಮಕಗೊಂಡಿರುವವರ ವಿವರಗಳು ಕೆಳಕಂಡಂತಿದೆ. **Sl. No. | Name of the Teacher | Date of duty report as Assoc. Prof. but pay Scale Fixed Rs. 15600-39100 +AGP 8000 | To be fixed as per reference, the Date of duty report as Assoc. Prof. pay scale Rs. 37,400-67000+AGP9000** 1. | Dr. O Kumar | 10-12-2011 | 10-12-2011 2. | Dr. B C Hanumanthaswamy | 22-12-2011 | 22-12-2011 3. | Dr. Jayalakshmi Narayana Hegde | 03-02-2012 | 03-02-2012 ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯಿಂದ ವಿಭಜನೆಗೊಂಡ ಕೆ.ಶಿ.ನಾ.ಕೃ.ತೋ.ವಿ.ವಿ., ಶಿವಮೊಗ್ಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹ ಪ್ರಾಧ್ಯಾಪಕರ ವಿವರ: **Sl. No. | Name of the Teacher | Date of duty report as Assoc. Prof. but pay Scale Fixed Rs. 15600-39100 +AGP 8000 | To be fixed as per reference, the Date of duty report as Assoc. Prof. pay scale Rs. 37,400-67000+AGP9000** 1. | Dr. Hanumantharaya L | 07-03-2011 | 07-03-2011 The Board approved the item as presented and subject to the review of Professor cadre promotion from the date of eligibility with fresh application. The details of the employees who were appointed as Associate Professors under the notification dated 31-01-2011—following the bifurcation from the University of Agricultural Sciences (UAS), Bengaluru and are currently serving at the Keladi Shivappa Nayaka University of Agricultural and Horticultural Sciences, Shivamogga, are as follows: **Sl. No. | Name of the Teacher | Date of duty report as Assoc. Prof. but pay Scale Fixed Rs. 15600-39100 +AGP 8000 | To be fixed as per reference, the Date of duty report as Assoc. Prof. pay scale Rs. 37,400-67000+AGP9000** 1. | Dr. O Kumar | 10-12-2011 | 10-12-2011 2. | Dr. B C Hanumanthaswamy | 22-12-2011 | 22-12-2011 3. | Dr. Jayalakshmi Narayana Hegde | 03-02-2012 | 03-02-2012 Details of Associate Professors working at KSNUAHS, Shivamogga (which was carved out of the University of Horticultural Sciences, Bagalkote). **Sl. No. | Name of the Teacher | Date of duty report as Assoc. Prof. but pay Scale Fixed Rs. 15600-39100 +AGP 8000 | To be fixed as per reference, the Date of duty report as Assoc. Prof. pay scale Rs. 37,400-67000+AGP9000** 1. | Dr. Hanumantharaya L | 07-03-2011 | 07-03-2011 **(Action: Administrative Officer)**

T.A. 60/5.	Approval of expenditure towards food, refreshments and drinking water facilities for Krishi-Thotagarike Mela - 2026 at College of Agriculture, Navile, Shivamogga	ವ್ಯವಸ್ಥಾಪನಾ ಮಂಡಳಿಯು ಕೃಷಿ ಮಹಾವಿದ್ಯಾಲಯ, ನವಿಲೆ, ಶಿವಮೊಗ್ಗದಲ್ಲಿ ನಡೆಯಲಿರುವ 'ಕೃಷಿ ತೋಟಗಾರಿಕೆ ಮೇಳ 2026'ಕ್ಕೆ ಸಂಬಂಧಿಸಿದಂತೆ, ಊಟ, ಉಪಹಾರ ಮತ್ತು ಕುಡಿಯುವ ನೀರಿನ ಸೌಲಭ್ಯಕ್ಕೆ ತಗಲುವ ವೆಚ್ಚದ ಪ್ರಸ್ತಾವನೆಗೆ ಅನುಮೋದನೆ ನೀಡಿತು. The Board approved the item for expenditure towards food, refreshments and drinking water facilities for Krishi-Thotagarike Mela - 2026 at College of Agriculture, Navile, Shivamogga. **(Action: Director of Extension & Estate Officer)**
T.A. 60/6.	Construction of Cold storage unit under NEOP project at Agriculture and Horticulture Research Station, Kathalagere	ಮಂಡಳಿಯು ಕತಲಗೆರೆಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರದಲ್ಲಿ NEOP ಯೋಜನೆಯಡಿ ಶೀತಲ ಗೃಹ ಘಟಕದ ನಿರ್ಮಾಣ ಕಾರ್ಯದ ಪ್ರಸ್ತಾವನೆಯನ್ನು ಅನುಮೋದಿಸಿತು. The Board approved the proposal for the construction of Cold storage unit under NEOP project at Agriculture and Horticulture Research Station, Kathalagere **(Action: Estate Officer)**
T.A. 60/7.	Construction of Seed godown at Agriculture and Horticulture Research Station, Kathalagere.	ಮಂಡಳಿಯು ಕತಲಗೆರೆಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರದಲ್ಲಿ ಬೀಜದ ಉಗ್ರಾಣದ ನಿರ್ಮಾಣ ಕಾರ್ಯದ ಪ್ರಸ್ತಾವನೆಯನ್ನು ಅನುಮೋದಿಸಿತು. The Board approved the item for construction of Seed godown at Agriculture and Horticulture Research Station, Kathalagere. **(Action: EO)**
T.A. 60/8.	Construction of Seed Processing unit at Agriculture and Horticulture Research Station, Kathalagere	ವ್ಯವಸ್ಥಾಪನಾ ಮಂಡಳಿಯು ಕತ್ತಲಗೆರೆಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರದಲ್ಲಿ ಬೀಜ ಸಂಸ್ಕರಣಾ ಘಟಕದ ನಿರ್ಮಾಣ ಕಾರ್ಯದ ಪ್ರಸ್ತಾವನೆಯನ್ನು ಅನುಮೋದಿಸಿತು. The Board approved the item for construction of Seed Processing unit at Agriculture and Horticulture Research Station, Kathalagere. **(Action: Estate Officer)**
T.A. 60/9.	ಕತ್ತಲಗೆರೆ ಗ್ರಾಮದ ಬಸವಾಪಟ್ಟಣ–2 ಹೋಬಳಿಯ ಸರ್ವೆ ನಂ. **163/P1 ರ ಒಟ್ಟು 237 ಎಕರೆ ಜಮೀನಿನ ಪೈಕಿ 24 ಎಕರೆ 05 ಗುಂಟೆ** ಜಮೀನನ್ನು, ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರ (AHRS), ಕತಲಗೆರೆಯ ಪಕ್ಕದಲ್ಲಿರುವ ಈಗಾಗಲೇ ಅಸ್ತಿತ್ವದಲ್ಲಿರುವ ಎರಡು ವಸತಿಗಳಾದ ಕವಳಿ ತಾಂಡಾ ಮತ್ತು ಶ್ರೀ ರಾಮನಗರ ಕ್ಯಾಂಪ್‌ಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸುವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲು ಅನುಮತಿ ನೀಡುವ ಕುರಿತು– ಉಲ್ಲೇಖ: ಕೃಷಿ ಇಲಾಖೆಯ ಕಾರ್ಯದರ್ಶಿಯವರ ಪತ್ರ ಸಂಖ್ಯೆ: No: AGRI/22/AUS/2026, ದಿನಾಂಕ: 28.09.2026.	ಮಂಡಳಿಯು ಈ ವಿಷಯಕ್ಕೆ ಗೌರವಾನ್ವಿತ ಮಂಡಳಿ ಸದಸ್ಯರಾದ ಶ್ರೀ ಟಿ. ಬಸವರಾಜ ನಾಯಕ್ ಇವರ ಅಧ್ಯಕ್ಷತೆಯಲ್ಲಿ ಹಾಗೂ ಶ್ರೀ ದೇವಿಕುಮಾರ್, ಸದಸ್ಯರು ಹಾಗೂ ಆಸ್ತಿ ಅಧಿಕಾರಿಗಳು, ಇವರು ಸದಸ್ಯ ಸಂಚಾಲಕರು, ಒಳಗೊಂಡ ಸಮಿತಿಯೊಂದನ್ನು ರಚಿಸಲು ಸೂಚಿಸಿತು. ಸಮಿತಿಯು ಪ್ರದೇಶದ ಸಂಪೂರ್ಣ ಸಮೀಕ್ಷೆ ಮತ್ತು ದಾಖಲೆಗಳ ಪರಿಶೀಲನೆಯನ್ನು ನಡೆಸಿ ವರದಿಯನ್ನು ಸಲ್ಲಿಸಬೇಕೆಂದು ಸೂಚಿಸಿತು. ಮುಂದುವರೆದು, ದಿನಾಂಕ: 14–10–2026ರಂದು ನಡವಳಿಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳ ಆಕ್ಷೇಪಣೆಗಳಿಗೆ ಸಲ್ಲಿಸಲಾಗಿತ್ತು. ಅದರಂತೆ ಸದಸ್ಯರುಗಳ ಸಲಹೆಯಂತೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಸಮಿತಿಯನ್ನು ರಚಿಸಲಾಗುವುದು. The Board suggested to constitute a Committee under the Chairmanship of the Hon'ble Board Member Sri T. Basavaraj Naik, Hon'ble Board Member Sri Devikumar and Estate Office (Member Convenor) to conduct survey of the entire area and verification of documents, and submit the report. Further, the proceedings were submitted on 14-10-2026 for the observations of the Hon'ble Members of the Board of Management. Accordingly, a committee will be constituted at the University level, as per the suggestions of the members. **(Action: Registrar & Estate Officer)**

ಸದಸ್ಯ–ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಂಡಿತು.

The Meeting ended with the proposal of Vote of Thanks by Member Secretary.

Sd/-	Sd/-
(ಡಾ. ಎಮ್.ವಿ. ಧನಂಜಯ) ಕುಲಪತಿಗಳು ಮತ್ತು ಅಧ್ಯಕ್ಷರು, ವ್ಯವಸ್ಥಾಪನಾ ಮಂಡಳಿ. (Dr. M. V. Dhananjaya) Vice Chancellor - Chairman, Board of Management.	(ಡಾ. ಶಾಮರಾವ ಜಹಾಗೀರದಾರ) ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿಗಳು, ವ್ಯವಸ್ಥಾಪನಾ ಮಂಡಳಿ (Dr. Shamarao Jahagirdar) Registrar & Member Secretary, Board of Management

Registrar/ಕುಲಸಚಿವರು

ಕುಲಸಚಿವರು
Registrar
ಕೆ.ಶಿ.ನಾ.ಕೃ.ತೋ.ವಿ.ವಿ., ಶಿವಮೊಗ್ಗ
K.S.N.U.A.H.S., Shivamogga.